# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5018/2023 ಫ್ರಾಸಾ-04
ಚಾಸಾ-06

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಪಲ್ಲವಿ |
| **ತಂದೆಯ ಹೆಸರು** | ಮೀನಪ್ಪ |
| **ವಯಸ್ಸು** | 26 |
| **ಉದ್ಯೋಗ** | ಮನೆ ಕೆಲಸ |
| **ವಾಸಸ್ಥಳ** | ಬಂದ್ರೆಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-1 ನನ್ನ ಅಕ್ಕ, 2 ನನ್ನ ಮಾವನಾಗಬೇಕು, ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿರುವುದಿಲ್ಲ. ಆರೊಪಿತರು ನಮ್ಮ ಊರಿನವರು , ಅವರನ್ನು ನಾನು ನೋಡಿರುತ್ತೇನೆ ಆದರೆ ಅವರ ಪರಿಚಯ ಇರುವುದಿಲ್ಲ. ಆರೋಪಿತರು ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿತರು ಏನು ತಪ್ಪು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ  ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 01.03.2023 ರಂದು ರಾತ್ರಿ 8-00 ಗಂಟೆಗೆ ನಾನು , ನಮ್ಮ ಮನೆ ಹತ್ತಿರ ಕೂಳಿತಿದ್ದಾಗ ಚಾಸಾ-2 ರವರ ಮನೆ ಹತ್ತಿರ ಚಾಸಾ-7, 3 ರಿಂದ 5 ರವರು ಕೂಳಿತಿದ್ದರು , ಆ ಸಮಯದಲ್ಲಿ ಆರೋಪಿತರು ಹಳೇ ದ್ವೇಷ ಇಟ್ಟುಕೊಂಡು ಹಣ ಕೊಡಬೇಕೆಂಬ ಉದ್ದೇಶದಿಂದ ಚಾಸಾ-2 ರವರ ಮೇಲೆ ಏಕಾ ಏಕಿ ಗಲಾಟೆ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ದೇವಸ್ಥಾನದ ಬಳಿ ಬಿದ್ದಿದ್ದ ಇಟ್ಟಿಗೆ ಪೀಸು ಮತ್ತು ಕಲ್ಲುಗಳಿಂದ ಚಾಸಾ-2 ರವರ ಎಡ ಕೆನ್ನೆಗೆ ಎಡ ಕಣ್ಣಿನ ಪಕ್ಕ ಹೊಡೆದರು ಅಷ್ಟರಲ್ಲಿ ನಾನು , ಚಾಸಾ-1, ಚಾಸಾ-3, ಚಾಸಾ-5 ರಿಂದ 7 ಹೋಗಿ ಜಗಳ ಬಿಡಿಸಿದೇವು , ಜಗಳ ಬಿಡಿಸುವಾಗ ಆರೋಪಿತರೆಲ್ಲರೂ ಚಾಸಾ-7 ಅಜ್ಜಿಯನ್ನು ತಳ್ಳಿದ್ದು ಅವರು ಕೆಳಗೆ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಚಾಸಾ-2 ರವರು ಚಿಕಿತ್ಸೆ ಪಡೆದುಕೊಂಡು ಪೊಲೀಸ್ ದೂರು ಕೊಡಲು ಎಂದು ರಾತ್ರಿ 8-40 ಗಂಟೆಗೆ ಭಾಗ್ಯಮ್ಮ ರವರ ಅಂಗಡಿಯ ಮುಂದಿನ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿ-1 ರಿಂದ 4 ರವರು ಚಾಸಾ-2 ರವರನ್ನು ಅಡ್ಡಗಟ್ಟಿ ನೀನು ಪೊಲೀಸ್ ಠಾಣೆಗೆ ನನ್ನ ಮೇಲೆ ದೂರು ಕೊಡಲು ಹೋಗುತ್ತೀಯಾ ನಿನಗೆ ಒಂದು ಗತಿ ಕಾಣಿಸುತ್ತೇವೆ ನೀನು ಹೇಗೆ ಹೋಗುತ್ತೀಯಾ ಎಂದು ಜಗಳ ತೆಗೆದರು ಆಗ ನಾನು ಚಾಸಾ-1, 3 ರಿಂದ 5 ಅಲ್ಲಿಗೆ ಹೋದಾಗ ಆರೋಪಿತರು ಈ ದಿವಸ ಚಾಸಾ-2 ರವರನ್ನು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಆರೋಪಿ ರಾಮು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಕೊಲೆ ಮಾಡುವ ಉದ್ದೇಶ ದಿಂದ ಚಾಸಾ-2 ರವರ ತಲೆ ಹಿಂಭಾಗಕ್ಕೆ ಜೊರಾಗಿ ಹೊಡೆದನು , ಆರೋಪಿ ಬಸವರಾಜು ಚಾಸಾ-2 ರವರನ್ನು ಕೊಲೆ ಮಾಡುವ ಉದ್ಧೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ತಲೆಯ ಎಡಭಾಗಕ್ಕೆ ಹೊಡೆದನು , ಆರೋಪಿ ಶನಿವಾರಪ್ಪ ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಬಲಗೈಗೆ ಹೊಡೆದನು ಅಷ್ಟರಲ್ಲಿ ನಾನು , ಚಾಸಾ-1, ಚಾಸಾ-3 ರಿಂದ 5 ಮತ್ತು 8 ರವರು ಸೇರಿ ಗಲಾಟೆ ಬಿಡಿಸಿರುತ್ತೇವೆ. ನಾಲ್ಕು ಜನ ದೊಣ್ಣೆಗಳನ್ನು ಅಲ್ಲೆ ಬಿಸಾಕಿ ಚಾಸಾ-2 ರವರಿಗೆ ಕೊಲೆ ಮಾಡದೇ ಬಿಡುವುದಿಲ್ಲ ನಿಮ್ಮ ಮನೆಯವರಿಗೆಲ್ಲರಿಗೂ ಒಂದು ಗತಿ ಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ಚಾಸಾ-2 ರವರನ್ನು ಮಧುಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ಅಲ್ಲಿಂದ

ತುಮಕೂರು ಮತ್ತು ಬೆಂಗಳೂರಿನ, ನಿಮಾನ್ಸ್, ವಿಕ್ಟೋರಿಯಾ ಮತ್ತು ಬಾಪಿಸ್ಟ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಶ್ರೀ. ಎಸ್.ಆರ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ</u>**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**